ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

2

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE

**ಲೆಕ್ಕಾಚಾರ** 2 ಸ್ಥಾನಕ್ಕೆ ನಿಮಗೆ ಬೇಕಾದವರನ್ನು ಸೂಚಿಸಿ: ಸಿಎಂ

# ವಿಧಾನಪರಿಷತ್ ಮೂರು ಸ್ಥಾನದ ಆಯ್ಕೆ ನನಗೆ ಬಿಡಿ: ಯಡಿಯೂರಪ್ಪ

• **ಕನ್ನಡಪ್ರಭ ವಾರ್ತೆ** ಬೆಂಗಳೂರು



ವಿಧಾನಪರಿಷತ್ತಿನ ನಾಮನಿರ್ದೇಶನ ಸಂಬಂಧ ಸಿಎಂ ಬಿ.ಎಸ್.ಯಡಿಯೂರಪ್ಪ ಅವರು 5 ಸ್ಥಾನಗಳ ಪೈಕಿ ಮೂರನ್ನು ತಮ್ಮ ಆಯ್ಕೆಗೆ ಬಿಡಲು ವರಿಷ್ಠರಿಗೆ ಪ್ರಸ್ತಾವನೆ ಕಳುಹಿಸಿದ್ದಾರೆ.

ಅಂದರೆ, ಮೂರು ಸ್ಥಾನಗಳಿಗೆ ತಮ್ಮ ಬೆಂಬಲಿಗರನ್ನು ಆಯ್ಕೆ ಮಾಡುವುದಾಗಿಯೂ ಮತ್ತು ಇನ್ನುಳಿದ ಎರಡು ಸ್ಥಾನಗಳಿಗೆ ಸಂಘ ಪರಿವಾರದ ಸಿದ್ಧಾಂತಗಳ ಪರವಾಗಿರುವ ವಿವಿಧ ಕ್ಷೇತ್ರಗಳ ಗಣ್ಯರು ಅಥವಾ ಪಕ್ಷದ ಹಿರಿಯ ಕಾರ್ಯಕರ್ತರಿಗೆ ನೀಡಬಹುದು ಎಂಬುದು ಮುಖ್ಯಮಂತ್ರಿಗಳ ಅಭಿಪ್ರಾಯ.

ಆದರೆ ಯಡಿಯೂರಪ್ಪ ಅವರ ಈ ಪ್ರಸ್ತಾವನೆ ಬಗ್ಗೆ ಇದುವರೆಗೆ ವರಿಷ್ಠರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಅಲ್ಲಿಂದ ಪ್ರತಿಕ್ರಿಯೆ ಬಂದ ನಂತರ ಪರಿಷತ್ತಿನ ನಾಮ ನಿರ್ದೇಶನ ಪ್ರಕ್ರಿಯೆ ಕೈಗೆತ್ತಿಕೊಳ್ಳಲಾಗುತ್ತದೆ ಎನ್ನಲಾಗಿದೆ.

ಕಳೆದರಾಜ್ಯಸಭಾಚುನಾವಣೆಮತ್ತುವಿಧಾನಸಭೆಯಿಂದ ವಿಧಾನಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ವರಿಷ್ಠರು ರಾಜ್ಯ ನಾಯಕರ ಆಯ್ಕೆಗೆ ಪೂರ್ಣ ಸಮ್ಮತಿ ನೀಡಿರಲಿಲ್ಲ. ಆದರಲ್ಲೂ ರಾಜ್ಯಸಭಾ ಚುನಾವಣೆಯಲ್ಲಿ ರಾಜ್ಯ ಬಿಜೆಪಿ ನಾಯಕರು ಕಳುಹಿಸಿದ ಹೆಸರುಗಳನ್ನು ತಿರಸ್ಕರಿಸಿ ಅಚ್ಚರಿಯ ಹೆಸರುಗಳನ್ನು ಸೂಚಿಸಿದ್ದರು. ಹೀಗಾಗಿ, ಈ ಬಾರಿ ಎಚ್ಚೆತ್ತುಕೊಂಡಿರುವ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಐದು ಸ್ಥಾನಗಳ ಪೈಕಿ ಮೂರಕ್ಕೆ ನಾವು ಸೂಚಿಸುತ್ತೇವೆ, ಇನ್ನುಳಿದ ಎರಡು ಸ್ಥಾನಗಳಿಗೆ ನೀವೇ ಸೂಚಿಸಿ ಎಂಬ ಮಧ್ಯಮ ದಾರಿ ತುಳಿದಿದ್ದಾರೆ. ಈ ಪೈಕಿ ಮಾಜಿ ಸಚಿವ ಸಿ.ಪಿ.ಯೋಗೀಶ್ವರ್, ಮಾಜಿ ಸದಸ್ಯೆ ಭಾರತಿ ಶೆಟ್ಟಿ ಅವರ ಹೆಸರುಗಳು ಪ್ರಮುಖವಾಗಿ ಯಡಿಯೂರಪ್ಪ ಪಾಳೆಯದಿಂದ ಪ್ರಸ್ತಾಪವಾಗಿವೆ. ಈ ಪೈಕಿ ಯೋಗೀಶ್ವರ್ ಅವರಿಗೆ ಸಂಘ ಪರಿವಾರದ ಬೆಂಬಲವೂ ಇದೆ ಎನ್ನಲಾಗಿದೆ. ಆದರೆ, ಕೋವಿಡ್ ನಿಯಂತ್ರಣದಲ್ಲಿ ನಿರತರಾಗಿರುವ ಪಕ್ಷದ ವರಿಷ್ಠರು ಇದುವರೆಗೆ ರಾಜ್ಯದ ಪರಿಷತ್ ನಾಮನಿರ್ದೇಶನದ ಬಗ್ಗೆ ಗಮನಹರಿಸಿಲ್ಲ. ಯಡಿಯೂರಪ್ಪ ಪ್ರಸ್ತಾವನೆಯನ್ನು ಒಪ್ಪಿಕೊಳ್ಳುತ್ತಾರೋ ಅಥವಾ ಬೇರೊಂದು ಪ್ರಸ್ತಾವನೆ ಮುಂದಿಡುತ್ತಾರೋ ಎಂಬುದು ಕುತೂಹಲಕರವಾಗಿದೆ.